# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ<br>(ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 181 |
| ಉತ್ತರಿಸ ಬೇಕಾದ ದಿನಾಂಕ | : | 14.02.2024 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರಾಷ್ಟ್ರೀಯ ಪಶುಸಂಪತ್ತು ಅಭಿಯಾನ (National Live Stock Mission) ಅಡಿ ಪಶು ವಿಮೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆಯೆ; ಹಾಗಿದ್ದಲ್ಲಿ, ಈ ಯೋಜನೆಯ ಧ್ಯೇಯೋದ್ದೇಶ ಮತ್ತು ರೂಪುರೇಷೆಗಳು ಯಾವುವು;<br>(ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಪಶು ಸಂಪತ್ತು ಅಭಿಯಾನ (National Live Stock Mission) ಅಡಿ ಪಶು ವಿಮೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಜಾನುವಾರುಗಳು ಮೃತಪಟ್ಟಾಗ ರೈತರಿಗೆ ಸಂಭವಿಸಬಹುದಾದ ಆರ್ಥಿಕ ನಷ್ಟವನ್ನು ಭರಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.<br><br>ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಶೇ. 60:40 ಅನುಪಾತದ ಆರ್ಥಿಕ ನೆರವಿನಡಿ ಅನುಷ್ಠಾನ ಗೊಳಿಸಲಾಗುತ್ತಿದೆ. ವಿಮೆಗೊಳಪಟ್ಟ ಜಾನುವಾರುವಿನ ಮೌಲ್ಯಕ್ಕನುಗುಣವಾಗಿ 1 ವರ್ಷಕ್ಕೆ ಶೇ.4.45, 2 ವರ್ಷಕ್ಕೆ ಶೇ.7.92 ಮತ್ತು 3 ವರ್ಷಕ್ಕೆ ಶೇ.10.92 ಪ್ರೀಮಿಯಂ ದರ ನಿಗದಿಪಡಿಸಿದೆ. SC/ST/BPL ಫಲಾನುಭವಿಗಳಿಗೆ ಶೇ.70 ರಷ್ಟು ಪ್ರೀಮಿಯಂ ಸಬ್ಸಿಡಿ ಹಾಗೂ APL ಮತ್ತು ಇತರೆ ಫಲಾನುಭವಿಗಳಿಗೆ ಶೇ.50 ಪ್ರೀಮಿಯಂ ಸಬ್ಸಿಡಿ ನೀಡಲಾಗುತ್ತಿದೆ. ಪ್ರತಿ ಕುಟುಂಬದ ಒಬ್ಬ ಸದಸ್ಯರು ಗರಿಷ್ಠ 5 ಹಸುಗಳಿಗೆ ವಿಮೆಯನ್ನು ಮಾಡಿಸಬಹುದಾಗಿದ್ದು, ಸಣ್ಣ ಪ್ರಾಣಿಗಳಾದ ಕುರಿ /ಮೇಕೆ /ಹಂದಿ/ಮೊಲ/ ಒಂದು ಯುನಿಟ್‌ಗೆ 10 ಪ್ರಾಣಿಗಳಂತೆ ಗರಿಷ್ಟ 50 ಪ್ರಾಣಿಗಳನ್ನು ವಿಮೆಗೊಳಪಡಿಸಬಹುದಾಗಿದೆ. |
| ಆ) | ಈ ಯೋಜನೆ ಅಡಿಯಲ್ಲಿ ಇದುವರೆಗೆ ಎಷ್ಟು ಪಶು ವಿಮೆಗಳನ್ನು ನೋಂದಾಯಿಸಲಾಗಿದೆ; (ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು) | ಈ ಯೋಜನೆಯಲ್ಲಿ ಇದುವರೆವಿಗೆ ಆಗಿರುವ ಪ್ರಗತಿ ವಿವರಗಳನ್ನು **<u>ಅನುಬಂಧ-1</u>** ರಲ್ಲಿ ನೀಡಿದೆ. |
| ಇ) | ಈ ಯೋಜನೆಯಡಿಯಲ್ಲಿ ತೀರುವಳಿ ಆಗದೇ ಉಳಿದಿರುವ ಪಶುವಿಮೆ ಪ್ರಕರಣಗಳ ತೀರುವಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳೇನು;<br>(ಪೂರ್ಣ ವಿವರ ನೀಡುವುದು) | ವಿಮೆಗೊಳಪಡಿಸಿದ ಯಾವುದೇ ಜಾನುವಾರುಗಳು ಮರಣ ಹೊಂದಿದ ಸಂದರ್ಭದಲ್ಲಿ ಟೆಂಡರ್ ಮೂಲಕ ಆಯ್ಕೆಯಾದ ವಿಮಾ ಸಂಸ್ಥೆಯು ಪ್ರಕರಣವನ್ನು ಕೂಡಲೇ ಇತ್ಯರ್ಥ ಗೊಳಿಸಲು ಟೆಂಡರ್ ದಸ್ತಾವೇಜಿನಲ್ಲಿ ಷರತ್ತನ್ನು ವಿಧಿಸಲಾಗಿದೆ. |

...2

| | | |
|---|---|---|
| ಈ) | ರಾಜ್ಯದಲ್ಲಿರುವ ಹೈನುಗಾರರ ಅನುಕೂಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಪ್ ಆಧಾರಿತ (App Based) ಪಶುವಿಮೆಯನ್ನು ಅಭಿವೃದ್ಧಿಸಿ, ಅಳವಡಿಲಾಗುವುದೇ? (ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು) | ಪ್ರಸ್ತುತ ಆಪ್ ಆಧಾರಿತ ಪಶು ವಿಮೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಳವಡಿಸಿರುವುದಿಲ್ಲ. ಆದರೆ ಪ್ರಸಕ್ತ ವರ್ಷದಲ್ಲಿ ಟೆಂಡರ್ ಮೂಲಕ ಗುರುತಿಸಲಾದ ಖಾಸಗಿ ವಿಮಾ ಸಂಸ್ಥೆ ಮೆ: IFFCOTOKIO ಅಭಿವೃದ್ಧಿಪಡಿಸಿರುವ Mobile App ಮೂಲಕ ಪಶು ವಿಮೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

**ಇ-ಪಸಂಮೀ 15 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

# ಅನುಬಂಧ 1

| ಕ್ರ ಸಂ | ಜಿಲ್ಲೆ | 2022-23ನೇ ಸಾಲು ಜಾನುವಾರು ವಿಮೆ | 2023-24ನೇ ಸಾಲು ಜಾನುವಾರು ವಿಮೆ (ಮುಂದುವರಿಯುತ್ತಿದೆ) |
|---|---|---|---|
| 1 | ಚಿಕ್ಕಮಗಳೂರು | 2126 | 5 |
| 2 | ಶಿವಮೊಗ್ಗ | 5797 | 48 |
| 3 | ಗದಗ | 1022 | 49 |
| 4 | ಚಾಮರಾಜನಗರ | 2918 | 15 |
| 5 | ಬೆಂಗಳೂರು ನಗರ | 1523 | 145 |
| 6 | ಚಿತ್ರದುರ್ಗ | 3439 | 171 |
| 7 | ಕೊಪ್ಪಳ | 1693 | 1 |
| 8 | ಬೆಳಗಾವಿ | 11360 | 137 |
| 9 | ಕೊಡಗು | 1068 | 6 |
| 10 | ಬಾಗಲಕೋಟೆ | 5487 | 49 |
| 11 | ಮೈಸೂರು | 6679 | 39 |
| 12 | ಕಲಬುರಗಿ | 4588 | 87 |
| 13 | ಉಡುಪಿ | 2530 | 22 |
| 14 | ದಕ್ಷಿಣ ಕನ್ನಡ | 2283 | 35 |
| 15 | ಚಿಕ್ಕಬಳ್ಳಾಪುರ | 2182 | 118 |
| 16 | ರಾಯಚೂರು | 1636 | 15 |
| 17 | ಹಾವೇರಿ | 3733 | 3 |
| 18 | ಧಾರವಾಡ | 2148 | 5 |
| 19 | ವಿಜಯಪುರ | 2779 | 72 |
| 20 | ದಾವಣಗೆರೆ | 4136 | 77 |
| 21 | ಬೆಂಗಳೂರು ಗ್ರಾಮಾಂತರ | 2319 | 53 |
| 22 | ಕೋಲಾರ | 3223 | 84 |
| 23 | ಉತ್ತರ ಕನ್ನಡ | 4087 | 28 |
| 24 | ಹಾಸನ | 4739 | 54 |
| 25 | ಬೀದರ | 2287 | 32 |
| 26 | ರಾಮನಗರ | 4053 | 14 |
| 27 | ತುಮಕೂರು | 6280 | 125 |
| 28 | ಯಾದಗಿರಿ | 714 | 0 |
| 29 | ಬಳ್ಳಾರಿ | 3467 | 18 |
| 30 | ಮಂಡ್ಯ | 3697 | 12 |
| ಒಟ್ಟು | | **103993** | **1519** |